# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:** ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಏಕಕಡತ ಸಂಖ್ಯೆ:DOM/ADMN/RECT/1/2026-Admin Sec.

**ಪ್ರಸ್ತಾವನೆ:-**

ಮೇಲೆ ಓದಲಾದ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಏಕಕಡತದಲ್ಲಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಮೌಲಾನಾ ಆಜಾದ್ ಮಾದರಿ ಶಾಲೆ/ಕಾಲೇಜುಗಳಿಗೆ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ವಿವಿಧ ವಿಷಯಗಳ ಹುದ್ದೆಗಳನ್ನು ಹೊರಗುತ್ತಿಗೆ/ಅತಿಥಿ ಉಪನ್ಯಾಸಕರು/ಶಿಕ್ಷಕರ ಮೂಲಕ ಭರ್ತಿ ಮಾಡಲು ಮಂಜೂರಾತಿ ನೀಡಲಾಗಿದ್ದು. ಸದರಿ ಕಾಲೇಜು/ಶಾಲೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು ಅವಶ್ಯವಿರುವುದರಿಂದ ಸದರಿ ಹುದ್ದೆಗಳ ನೇಮಕಾತಿ ವಿಧಾನವನ್ನು "ವೃಂದ ಮತ್ತು ನೇಮಕಾತಿ ನಿಯಮಗಳಂತೆ" ಎಂದು ಬದಲಾಯಿಸಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲು ಕೋರಿರುತ್ತಾರೆ.

**ಮಂಜೂರಾಗಿರುವ ಹೊರಗುತ್ತಿಗೆ/ಅತಿಥಿ ಉಪನ್ಯಾಸಕರು/ಶಿಕ್ಷಕರ ಹುದ್ದೆಗಳ ವಿವರ**

| ಕ್ರ.ಸಂ | ಹುದ್ದೆಯ ಹೆಸರು | ಮಂಜೂರಾತಿ ಸಂಖ್ಯೆ | | | |
|---|---|---|---|---|---|
| | | ವಸತಿ ಪದವಿ ಪೂರ್ವ ಕಾಲೇಜು | ಮೌಲಾನಾ ಆಜಾದ್ ಮಾದರಿ ಶಾಲೆ/ ಕಾಲೇಜು | ಪದವಿ ಪೂರ್ವ ಕಾಲೇಜು (ವಕ್ಫ್ ಮಂಡಳಿ) | ಒಟ್ಟು |
| 01 | ಕನ್ನಡ ಭಾಷಾಉಪನ್ಯಾಸಕರು | 60 | 25 | 31 | 116 |
| 02 | ಆಂಗ್ಲ ಭಾಷಾ ಉಪನ್ಯಾಸಕರು | 60 | 25 | 31 | 116 |
| 03 | ಹಿಂದಿ ಭಾಷಾ ಉಪನ್ಯಾಸಕರು | 0 | 0 | 31 | 31 |
| 04 | ಉರ್ದು ಭಾಷಾ ಉಪನ್ಯಾಸಕರು | 60 | 25 | 31 | 116 |
| 05 | ಭೌತಶಾಸ್ತ್ರ ಉಪನ್ಯಾಸಕರು | 0 | 25 | 31 | 56 |
| 06 | ರಸಾಯನಶಾಸ್ತ್ರ ಉಪನ್ಯಾಸಕರು | 0 | 25 | 31 | 56 |
| 07 | ಗಣಿತಶಾಸ್ತ್ರ ಉಪನ್ಯಾಸಕರು | 0 | 25 | 31 | 56 |

| | | | | | |
|---|---|---|---|---|---|
| 08 | ಜೀವಶಾಸ್ತ್ರ ಉಪನ್ಯಾಸಕರು | 0 | 25 | 31 | 56 |
| 09 | ಇತಿಹಾಸ ಉಪನ್ಯಾಸಕರು | 5 | 0 | 31 | 36 |
| 10 | ಅರ್ಥಶಾಸ್ತ್ರ ಉಪನ್ಯಾಸಕರು | 5 | 0 | 31 | 36 |
| 11 | ವಾಣಿಜ್ಯಶಾಸ್ತ್ರ ಉಪನ್ಯಾಸಕರು | 5 | 0 | 31 | 36 |
| 12 | ಲೆಕ್ಕಶಾಸ್ತ್ರ ಉಪನ್ಯಾಸಕರು | 5 | 0 | 31 | 36 |
| 13 | ಗಣಕಯಂತ್ರ ಉಪನ್ಯಾಸಕರು | 0 | 0 | 31 | 31 |
| 14 | ರಾಜಕೀಯ ಶಾಸ್ತ್ರ ಉಪನ್ಯಾಸಕರು | 0 | 0 | 31 | 31 |
| 15 | ಸಮಾಜಶಾಸ್ತ್ರ ಉಪನ್ಯಾಸಕರು | 0 | 0 | 31 | 31 |
| 16 | ಕನ್ನಡ ಭಾಷಾ ಶಿಕ್ಷಕರು | 0 | 100 | 0 | 100 |
| 17 | ಆಂಗ್ಲ ಭಾಷಾ ಶಿಕ್ಷಕರು | 0 | 100 | 0 | 100 |
| 18 | ಉರ್ದು ಭಾಷಾ ಶಿಕ್ಷಕರು | 0 | 100 | 0 | 100 |
| 19 | ಗಣಿತ ಶಿಕ್ಷಕರು | 0 | 100 | 0 | 100 |
| 20 | ಸಾಮಾನ್ಯ ವಿಜ್ಞಾನ ಶಿಕ್ಷಕರು | 0 | 100 | 0 | 100 |
| 21 | ಸಮಾಜ ವಿಜ್ಞಾನ ಶಿಕ್ಷಕರು | 0 | 100 | 0 | 100 |
| 22 | ಹಿಂದಿ ಶಿಕ್ಷಕರು | 0 | 250 | 0 | 250 |
| 23 | ದೈಹಿಕ ಶಿಕ್ಷಣ ಶಿಕ್ಷಕರು | 0 | 250 | 0 | 250 |
| | **ಒಟ್ಟು** | **200** | **1275** | **465** | **1940** |

ಅಲ್ಪಸಂಖ್ಯಾತರ ನಿರ್ದೇಶನಾಲಯದಡಿಯಲ್ಲಿ ಒಟ್ಟು 329 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ನವೋದಯ ಮಾದರಿ ವಸತಿ ಶಾಲೆ/ಡಾ|| ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಬೋಧಕ ಹುದ್ದೆಗಳು ಹೆಚ್ಚಿನ ಪ್ರಮಾಣದಲ್ಲಿ ಖಾಲಿ ಉಳಿದಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವುದಲ್ಲದೆ, ವಾರ್ಷಿಕ ಶೇಕಡವಾರು ಫಲಿತಾಂಶದಲ್ಲಿ ಇಳಿಕೆ ಉಂಟಾಗುವ ಸಾಧ್ಯತೆ ಇರುತ್ತದೆ. ಅಲ್ಪಸಂಖ್ಯಾತ ಸಮುದಾಯದವರ ಶೈಕ್ಷಣಿಕ ಮಟ್ಟವನ್ನು ಉತ್ತಮಪಡಿಸಲು ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡುವುದು ಅತೀ ಅವಶ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

ಪ್ರಸ್ತುತ ನೇರ ನೇಮಕಾತಿಯಡಿ ಖಾಲಿ ಇರುವ ಮೇಲ್ಕಂಡ ಹುದ್ದೆಗಳು ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಯಾಗಿರುವುದಿಲ್ಲ. ಆದ್ದರಿಂದ ಸರ್ಕಾರದ ಕಾರ್ಯಕಾರಿ ಆದೇಶ ಸಂಖ್ಯೆ:MWD 108 MDS 2016, ದಿ:03.09.2016 ಮತ್ತು ಸರ್ಕಾರದ ಆದೇಶ ಸಂಖ್ಯೆ:MWD 204 MDS 2017, ದಿ:15.06.2018ರ ಮುಖಾಂತರ ನೇಮಕಾತಿ ವಿಧಾನ ಮತ್ತು ವಿದ್ಯಾರ್ಹತೆಯನ್ನು ನಿಗಧಿಪಡಿಸಿ ಭರ್ತಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ನವೋದಯ ಮಾದರಿ ವಸತಿ ಶಾಲೆ/ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆ/ಕಾಲೇಜುಗಳಲ್ಲಿನ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿ

ಸಮಗ್ರವಾಗಿ ಪರಿಷ್ಕರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿ ಇರುವುದರಿಂದ, ಸದರಿ ಪ್ರಕ್ರಿಯೆಗೆ ಹೆಚ್ಚಿನ ಕಾಲಾವಕಾಶ ಅಗತ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

ಆದ ಕಾರಣ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2026, ದಿ:27.02.2026ರಲ್ಲಿ ಇಲಾಖೆಗಳಲ್ಲಿ ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಂದಿನ 30 ದಿನಗಳಲ್ಲಿ ಪ್ರಾರಂಭಿಸಲು ಸೂಚಿಸಿರುವುದರಿಂದ ಈ ಕೆಳಕಂಡ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು ಅವಶ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

| ಕ್ರ. ಸಂ | ಶೈಕ್ಷಣಿಕ ಸಂಸ್ಥೆ | ನೇರ ನೇಮಕಾತಿಯಡಿ ಖಾಲಿ ಇರುವ ಹುದ್ದೆಗಳ | ಹೊರಗುತ್ತಿಗೆ /ಅತಿಥಿ ಶಿಕ್ಷಕರ ಹುದ್ದೆಗಳು | ಒಟ್ಟು |
|---|---|---|---|---|
| 01 | ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜು | 600 | 200 | 800 |
| 02 | ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ)/ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ | 94 | 0 | 94 |
| 03 | ಮೌಲಾನಾ ಆಜಾದ್ ಮಾದರಿ ಶಾಲೆ/ಕಾಲೇಜು | 775 | 1275 | 2050 |
| 04 | ಮಹಿಳಾ ಪದವಿ ಪೂರ್ವ ಕಾಲೇಜು (ವಕ್ಫ ಮಂಡಳಿ) | 0 | 465 | 465 |
| ಒಟ್ಟು | | **1469** | **1940** | **3409** |

ಸದರಿ ಶಾಲಾ/ಕಾಲೇಜುಗಳಿಗೆ ಹೊರಗುತ್ತಿಗೆ/ಅತಿಥಿ ಶಿಕ್ಷಕರ ಮೂಲಕ ಭರ್ತಿ ಮಾಡಲು ಮಂಜೂರಾತಿ ನೀಡಿರುವ 1940 ಹುದ್ದೆಗಳ ನೇಮಕಾತಿ ವಿಧಾನವನ್ನು "ವೃಂದ ಮತ್ತು ನೇಮಕಾತಿ ನಿಯಮಗಳಂತೆ" ಎಂದು ಬದಲಾಯಿಸಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದ ಶೈಕ್ಷಣಿಕ ಸಂಸ್ಥೆಗಳಲ್ಲಿ ಖಾಲಿ ಇರುವ ಒಟ್ಟು 3409 [1469 - ನೇರ ನೇಮಕಾತಿ ಮತ್ತು 1940- ಹೊರಗುತ್ತಿಗೆ/ಅತಿಥಿ ಉಪನ್ಯಾಸಕರು/ಶಿಕ್ಷಕರ] ಉಪನ್ಯಾಸಕರು/ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕಾರ್ಯಕಾರಿ ಆದೇಶವನ್ನು ನವೀಕರಿಸಲು ಹಾಗೂ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರಂತೆ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD-MDS/472/2026,**
**ಬೆಂಗಳೂರು ದಿನಾಂಕ:20.06.2026.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಲ್ಪಸಂಖ್ಯಾತರ ಕಲ್ಯಾಣ, ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ)/ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಮೌಲಾನಾ ಆಜಾದ್ ಮಾದರಿ ಶಾಲೆ ಮತ್ತು ಕಾಲೇಜುಗಳಲ್ಲಿ ಮಂಜೂರಾಗಿ ಖಾಲಿಯಿರುವ ವಿವಧ ವೃಂದದ ಈ ಕೆಳಕಂಡ ಒಟ್ಟು 1042 ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

1. ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಶಾಲೆಗಳಲ್ಲಿ ಮಂಜೂರಾಗಿ, ಖಾಲಿಯಿರುವ 600 ಹುದ್ದೆಗಳ ಎದುರಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆದು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿ ಈ ಕೆಳಕಂಡ 452 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳುವುದು.

| **1. ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು** | | | | |
|---|---|---|---|---|
| **ಕ್ರ. ಸಂ.** | **ಹುದ್ದೆಯ ಪದನಾಮ** | **ಆರ್ಥಿಕ ಇಲಾಖೆಯು ಭರ್ತಿ ಮಾಡಿಕೊಳ್ಳಲು ಸಹಮತಿಸಿದ ಹುದ್ದೆಗಳ ಸಂಖ್ಯೆ** | | |
| | | **ಉಳಿಕೆ ವೃಂದ ಮೂಲ** | **ಕಲ್ಯಾಣ ಕರ್ನಾಟಕ ವೃಂದ ಮೂಲ** | **ಒಟ್ಟು ಹುದ್ದೆಗಳ ಸಂಖ್ಯೆ** |
| 1 | ಕನ್ನಡ ಭಾಷಾ ಉಪನ್ಯಾಸಕರು | 6 | 2 | 8 |
| 2 | ಆಂಗ್ಲ ಭಾಷಾ ಉಪನ್ಯಾಸಕರು | 7 | 3 | 10 |
| 3 | ಉರ್ದು ಭಾಷಾ ಉಪನ್ಯಾಸಕರು | 1 | 1 | 2 |
| 4 | ಭೌತಶಾಸ್ತ್ರ ಉಪನ್ಯಾಸಕರು | 43 | 14 | 57 |
| 5 | ರಸಾಯನಶಾಸ್ತ್ರ ಉಪನ್ಯಾಸಕರು | 43 | 14 | 57 |
| 6 | ಗಣಿತ ಶಾಸ್ತ್ರ ಉಪನ್ಯಾಸಕರು | 43 | 14 | 57 |
| 7 | ಜೀವಶಾಸ್ತ್ರ ಉಪನ್ಯಾಸಕರು | 43 | 14 | 57 |
| 8 | ಗಣಕಯಂತ್ರ ಉಪನ್ಯಾಸಕರು | 35 | 13 | 48 |
| 9 | ಇತಿಹಾಸ ಉಪನ್ಯಾಸಕರು | 2 | 1 | 3 |
| 10 | ಅರ್ಥಶಾಸ್ತ್ರ ಉಪನ್ಯಾಸಕರು | 34 | 13 | 47 |
| 11 | ವಾಣಿಜ್ಯಶಾಸ್ತ್ರ ಉಪನ್ಯಾಸಕರು | 38 | 15 | 53 |
| 12 | ಲೆಕ್ಕ ಶಾಸ್ತ್ರ ಉಪನ್ಯಾಸಕರು | 38 | 15 | 53 |
| | **ಒಟ್ಟು** | **333** | **119** | **452** |

2. ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ)/ ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಮಂಜೂರಾಗಿ ಖಾಲಿ ಇರುವ 94 ಹುದ್ದೆಗಳ ಎದುರಾಗಿ ಅತಿಥಿ ಶಿಕ್ಷಕರ ಸೇವೆಯನ್ನು ಪಡೆದು ಕಾರ್ಯನಿರ್ವಹಿಸುತ್ತಿದ್ದು, ಹುದ್ದೆಗಳಲ್ಲಿ ಈ ಕೆಳಕಂಡ 58 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳುವುದು ಹಾಗೂ ದೈಹಿಕ ಶಿಕ್ಷಣ ಮತ್ತು ಆರ್ಟ್ ಕ್ರಾಫ್ಟ್ ಶಿಕ್ಷಕರ ಹುದ್ದೆಗಳಿಗೆದುರಾಗಿ ಅತಿಥಿ ಶಿಕ್ಷಕರನ್ನೆ ಮುಂದುವರೆಸುವುದು.

| ಕ್ರ. ಸಂ. | ಹುದ್ದೆಯ ಪದನಾಮ | ಆರ್ಥಿಕ ಇಲಾಖೆಯು ಭರ್ತಿ ಮಾಡಿಕೊಳ್ಳಲು ಸಹಮತಿಸಿದ ಹುದ್ದೆಗಳ ಸಂಖ್ಯೆ | | |
|---|---|---|---|---|
| 2. ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ)/ ಡಾ\|\| ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ. | | | | |
| | | ಉಳಿಕೆ ವೃಂದ ಮೂಲ | ಕಲ್ಯಾಣ ಕರ್ನಾಟಕ ವೃಂದ ಮೂಲ | ಒಟ್ಟು ಹುದ್ದೆಗಳ ಸಂಖ್ಯೆ |
| 1 | ಕನ್ನಡ ಭಾಷಾ ಉಪನ್ಯಾಸಕರು | 1 | 5 | 6 |
| 2 | ಆಂಗ್ಲ ಭಾಷಾ ಉಪನ್ಯಾಸಕರು | 1 | 6 | 7 |
| 3 | ಹಿಂದಿ ಭಾಷಾ ಶಿಕ್ಷಕರು | 0 | 3 | 3 |
| 4 | ಉರ್ದು ಭಾಷಾ ಉಪನ್ಯಾಸಕರು | 0 | 4 | 4 |
| 5 | ಗಣಿತ ಶಿಕ್ಷಕರು | 3 | 5 | 8 |
| 6 | ಸಮಾಜ ವಿಜ್ಞಾನ ಶಿಕ್ಷಕರು | 4 | 6 | 10 |
| 7 | ಗಣಿತಶಾಸ್ತ್ರ ಉಪನ್ಯಾಸಕರು | 2 | 5 | 7 |
| 8 | ಭೌತಶಾಸ್ತ್ರ ಉಪನ್ಯಾಸಕರು | 2 | 5 | 7 |
| 9 | ರಸಾಯನ ಶಾಸ್ತ್ರ ಶಿಕ್ಷಕರು | 1 | 5 | 6 |
| | **ಒಟ್ಟು** | **14** | **44** | **58** |

3. ಮೌಲಾನಾ ಅಜಾದ್ ಮಾದರಿ ಶಾಲೆ ಮತ್ತು ಕಾಲೇಜುಗಳಿಗೆ ಮಂಜೂರಾಗಿ, ಖಾಲಿಯಿರುವ 775 ಹುದ್ದೆಗಳ ಎದುರಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆದು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿ ಈ ಕೆಳಕಂಡ 532 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳುವುದು.

| ಕ್ರ. ಸಂ. | ಹುದ್ದೆಯ ಪದನಾಮ | ಆರ್ಥಿಕ ಇಲಾಖೆಯು ಭರ್ತಿ ಮಾಡಿಕೊಳ್ಳಲು ಸಹಮತಿಸಿದ ಹುದ್ದೆಗಳ ಸಂಖ್ಯೆ | | |
|---|---|---|---|---|
| 4. ಮೌಲಾನಾ ಆಜಾದ್ ಮಾದರಿ ಶಾಲೆ ಮತ್ತು ಕಾಲೇಜು. | | | | |
| | | ಉಳಿಕೆ ವೃಂದ ಮೂಲ | ಕಲ್ಯಾಣ ಕರ್ನಾಟಕ ವೃಂದ ಮೂಲ | ಒಟ್ಟು ಹುದ್ದೆಗಳ ಸಂಖ್ಯೆ |
| 1 | ಕನ್ನಡ ಭಾಷಾ ಶಿಕ್ಷಕರು | 66 | 25 | 91 |
| 2 | ಆಂಗ್ಲ ಭಾಷಾ ಶಿಕ್ಷಕರು | 66 | 22 | 88 |
| 3 | ಉರ್ದು ಭಾಷಾ ಶಿಕ್ಷಕರು | 70 | 25 | 95 |
| 4 | ಗಣಿತ ಶಿಕ್ಷಕರು | 65 | 23 | 88 |
| 5 | ಸಾಮಾನ್ಯ ವಿಜ್ಞಾನ ಶಿಕ್ಷಕರು | 60 | 24 | 84 |
| 6 | ಸಮಾಜ ವಿಜ್ಞಾನ ಶಿಕ್ಷಕರು | 62 | 24 | 86 |
| | **ಒಟ್ಟು** | **389** | **143** | **532** |

5



| 5. ABSTRACT. | | | | |
|---|---|---|---|---|
| ಕ್ರ. ಸಂ. | ಸಂಸ್ಥೆ | ಕಲ್ಯಾಣ ಕರ್ನಾಟಕ ವೃಂದ ಮೂಲ | ಉಳಿಕೆ ವೃಂದ ಮೂಲ | ಒಟ್ಟು ಹುದ್ದೆಗಳು |
| 1 | ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜು | 119 | 333 | 452 |
| 2 | ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ)/ಡಾ\|\| ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ | 44 | 14 | 58 |
| 3 | ಮೌಲಾನಾ ಆಜಾದ್ ಮಾದರಿ ಶಾಲೆ | 143 | 389 | 532 |
| | ಒಟ್ಟು | **306** | **736** | **1042** |

ಮುಂದುವರೆದು, ಹೊರಗುತ್ತಿಗೆ/ ಅತಿಥಿ ಶಿಕ್ಷಕರ ಮೂಲಕ ಭರ್ತಿ ಮಾಡಲು ನೀಡಿರುವ 1940 ಹುದ್ದೆಗಳ ನೇಮಕಾತಿ ವಿಧಾನವನ್ನು C & R ಎಂದು ಬದಲಾಯಿಸಿ ನೇಮಕಾತಿ ಮಾಡಿಕೊಳ್ಳಲು ಕೋರುತ್ತಿರುವ ಪ್ರಸ್ತಾವನೆಯನ್ನು ಒಪ್ಪಲು ಬರುವುದಿಲ್ಲ ಎಂದು ತಿಳಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ನೀಡಿರುವ ಟಿಪ್ಪಣಿ ಸಂಖ್ಯೆ:ಆಇ 92 ಎಫ್‌ಆರ್‌ಸಿ 2026, ದಿನಾಂಕ:15-06-2026ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

20/06/26
(ಫಾತಿಮಾ ಜಹೀರಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ.

ಗೆ:

1) ಪ್ರಧಾನ ಮಹಾಲೇಖಪಾಲರು (ಅ ಮತ್ತು ಇ) (ಲೆಕ್ಕ ಪರಿಶೋಧನೆ-1& 2) ಕರ್ನಾಟಕ,ಬೆಂಗಳೂರು.
2) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ಎಫ್.ಆರ್.ಸಿ & ಸಿ.ಸಿ), ವಿಧಾನಸೌಧ, ಬೆಂಗಳೂರು.
4) ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ವಸಂತನಗರ, ಬೆಂಗಳೂರು.
5) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್. (ನಿರ್ದೇಶಕರ ಮುಖಾಂತರ)
6) ಎಲ್ಲಾ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. (ನಿರ್ದೇಶಕರ ಮುಖಾಂತರ).
7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

<u>ಪ್ರತಿ ಮಾಹಿತಿಗಾಗಿ:</u>

1) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸಸೌಧ, ಬೆಂಗಳೂರು.
2) ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸಸೌಧ, ಬೆಂಗಳೂರು.